ರಾಜ್ಯದ ಗುಲ್ಬರ್ಗಾ, ಬಿಜಾಪುರ, ರಾಯಚೂರು ಮತ್ತು ಬೀದರ್ ಜಿಲ್ಲೆಗಳಲ್ಲಿ ತೊಗರಿ ಬೆಳೆಗೆ ಕಾಯಿ ಕೊರೆಯುವ ಹುಳುವಿನಿಂದ ಹಾಗೂ ನೈಸರ್ಗಿಕ ವೈಪರೀತ್ಯದಿಂದಾಗಿ ಹಾನಿಯಾಗಿರುತ್ತದೆ.

ಗುಲ್ಬರ್ಗಾ ಜಿಲ್ಲೆ ಮತ್ತು ಇಂಡಿ ತಾಲ್ಲೂಕು ಬಿಜಾಪುರ ಜಿಲ್ಲೆಗಳಲ್ಲಿ ಪೂರ್ಣ ಬೆಳೆಯಾಗಿ ತೊಗರಿಯನ್ನು ಬೆಳೆದು ಹಾನಿಯಾದ ಪ್ರದೇಶಗಳಿಗೆ ಮಾತ್ರ ಪರಿಹಾರ ನೀಡಲಾಗಿದೆ. ಉಳಿದ ಭಾಗಗಳಿಗೆ ಪರಿಹಾರ ನೀಡುವುದಿಲ್ಲ.

ತೊಗರಿ ಬೆಳೆಯನ್ನು ಪೂರ್ಣ ಬೆಳೆಯಾಗಿ ಬೆಳೆದು ಕಾಯಿ ಕೊರೆಯುವ ಹುಳುವಿನ ಭಾದೆಯಿಂದ ಹಾಗೂ ಹವಾಮಾನ ವೈಪರೀತ್ಯದಿಂದಾಗಿ ಹಾನಿಯಾದ ಭಾಗಗಳಲ್ಲಿ ಪರಿಹಾರ ನೀಡುವ ಯೋಜನೆಗನುಗುಣವಾಗಿ ಕಾರ್ಯಕ್ರಮ ಕೈಗೊಳ್ಳಲಾಗಿದೆ. ಬೀದರ್ ಜಿಲ್ಲೆಯಲ್ಲಿ ತೊಗರಿ ಬೆಳೆಯನ್ನು ಮಿಶ್ರ ಬೆಳೆಯಾಗಿ ಜೋಳ, ಸಜ್ಜೆ, ಕಡಲೆ ಮತ್ತು ಎಳ್ಳುಗಳೊಂದಿಗೆ ಬೆಳೆಯಲಾಗಿತ್ತು. ಪರಿಹಾರ ನೀಡುವ ಯೋಜನೆಯನ್ನು ಶೇ: 75 ಭಾಗ ಪೂರ್ಣ ತೊಗರಿ ಬೆಳೆ ಹಾನಿಯಾದ ರೈತರುಗಳು ಒಳಪಟ್ಟಿರುತ್ತಾರೆ. ಆದರೆ ಬೀದರ್ ಜಿಲ್ಲೆಯಲ್ಲಿ ಮಿಶ್ರ ಬೆಳೆಯಾಗಿ ಬೆಳೆದು ಶೇ.50 ಭಾಗ ಮಾತ್ರ ಹಾನಿಗೊಳಪಟ್ಟಿರುತ್ತದೆ.

ವಿಷಯ : - ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಹಾನಿಗೊಳಗಾದ ಪಂಪುಸೆಟ್ಟುಗಳ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 380(529)

ಶ್ರೀ ಬಿ. ಹಂಪನಗೌಡ(ಸಿಂಧನೂರು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಹಾನಿಗೊಳಗಾದ ಪಂಪ್‌ಸೆಟ್‌ಗಳೆಷ್ಟು;

(ಆ) ಆ ಹಾನಿಯನ್ನು ತುಂಬಲು ಬಿಡುಗಡೆಯಾದ ಹಣ ಎಷ್ಟು;

(ಇ) ಆದಕ್ಕಾಗಿ ನಿಗದಿಪಡಿಸಿದ ಹಣ ಎಷ್ಟು ಹಾಗೂ ಇದುವರೆವಿಗೂ ಖರ್ಚಾದ ಹಣ ಎಷ್ಟು;

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

1992ರ ನವೆಂಬರ್ ತಿಂಗಳಿನಲ್ಲಿನ ಅತೀವೃಷ್ಟಿಯಿಂದ ಸಿಂಧನೂರು ತಾಲ್ಲೂಕಿನಲ್ಲಿ 1,059 ಪಂಪ್‌ಸೆಟ್‌ಗಳು ಹಾನಿಗೊಳಗಾಗಿವೆ.

ರೂ.5.00 ಲಕ್ಷಗಳು. ಇದಕ್ಕಾಗಿ ಇನ್ನೂ ತಗಲುವ ಹೆಚ್ಚಿನ ವೆಚ್ಚವನ್ನು ತಹಶೀಲ್ದಾರ್, ಸಿಂಧನೂರು ಅವರ ಬಳಿ ಉಳಿದಿರುವ ಹಣದಿಂದ ಭರಿಸಲು ಅನುಮತಿ ನೀಡಿದೆ.

ಹಾನಿಗೊಳಗಾದನೀರಾವರಿ ಪಂಪ್‌ಸೆಟ್‌ಗೆ ಗರಿಷ್ಠ ಪರಿಹಾರ ರೂ. 3000-00ಗಳಷ್ಟು ನಿಗದಿಪಡಿಸಿದೆ. ಇದುವರೆಗೂ 538 ಪಂಪ್‌ಸೆಟ್‌ಗಳಿಗೆ 5.38 ಲಕ್ಷ ರೂ.ಗಳನ್ನು ಖರ್ಚು ಮಾಡಿದೆ.

ವಿಷಯ : - ಸಿಂಧನೂರು ತಾಲ್ಲೂಕಿನಲ್ಲಿ ಬರುವ ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಬಗ್ಗೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ : 381(521)

ಶ್ರೀ ಬಿ. ಹಂಪನಗೌಡ(ಸಿಂಧನೂರು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಸಿಂಧನೂರು ತಾಲ್ಲೂಕಿನಲ್ಲಿ ಬರುವ ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ

ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ.

(ಆ) ಇದ್ದಲ್ಲಿ, ಅಂತಹ ಎಷ್ಟು ಪ್ರಸ್ತಾವನೆಗಳು ಸರ್ಕಾರಕ್ಕೆ ಬಂದಿವೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಸಿಂಧನೂರು ತಾಲ್ಲೂಕಿನಲ್ಲಿರುವ ಯಾವುದೇ ಕ್ಯಾಂಪ್‌ಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡುವ ಉದ್ದೇಶ ಇರುವುದಿಲ್ಲ.

ಉದ್ಭವಿಸುವುದಿಲ್ಲ.

ವಿಷಯ : – ಸಿಂಧನೂರು ತಾಲ್ಲೂಕಿನಲ್ಲಿ ನೆರೆ ಹಾವಳಿಯಿಂದ ಹಾನಿಗೀಡಾದ್ದಕ್ಕೆ ಪುನರ್ವಸತಿ ಕಾರ್ಯಕ್ರಮದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 382(522)

ಶ್ರೀ ಬಿ. ಹಂಪನಗೌಡ (ಸಿಂಧನೂರು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಆ) ಸಿಂಧನೂರು ತಾಲ್ಲೂಕಿನಲ್ಲಿ ಕಳೆದವರ್ಷ ನವೆಂಬರ್ ತಿಂಗಳಿನಲ್ಲಿ ನೆರೆ ಹಾವಳಿಯಿಂದ ಹಾನಿಗೀಡಾದ ಗ್ರಾಮಗಳ ಪುನರ್ವಸತಿ ಕಾರ್ಯಕ್ರಮ ಯಾವ ಹಂತದಲ್ಲಿದೆ?

(ಆ) ಇಲ್ಲಿಯವರೆಗೆ ಯಾವಯಾವ ಕೆಲಸಗಳನ್ನು ಪುನರ್‌ವಸತಿ ಕಾರ್ಯಕ್ರಮಗಳಲ್ಲಿ ಸೇರಿಸಿಕೊಳ್ಳಲಾಗಿದೆ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು)

ಸಿಂಧನೂರು ತಾಲ್ಲೂಕಿನಲ್ಲಿ 1992ರ ನವೆಂಬರ್ ತಿಂಗಳಿನಲ್ಲಿ ನೆರೆ ಹಾವಳಿಯಿಂದ ಹಾನಿಗೀಡಾದ ಆರು ಗ್ರಾಮಗಳಾದ, ಪುಲಮೇಶ್ವರದಿನ್ನಿ, ಚಿತ್ರಾಲಿ, ಹರಟನೂರು, ಹುಲಗುಂಟೆ, ಹೆಡಗಿನಾಳ್ ಮತ್ತು ಬಾದರ್ಲಿಗಳಲ್ಲಿ ಪುನರ್ವಸತಿ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಮೊದಲ ನಾಲ್ಕು ಗ್ರಾಮಗಳಲ್ಲಿ ಪುನರ್ವಸತಿಗಾಗಿ ಖಾಸಗಿಯವರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇನ್ನುಳಿದ ಹೆಡಗೀನಾಳ ಮತ್ತು ಬಾದರ್ಲಿ ಗ್ರಾಮಗಳ ಪುನರ್ವಸತಿಗಾಗಿ ಸರ್ಕಾರಿ ಭೂಮಿ ಲಭ್ಯವಿದೆ. ಬಾದರ್ಲಿ ಗ್ರಾಮದ ಪುನರ್ವಸತಿ ಪ್ರಸ್ತಾವನೆಯನ್ನು ಇನ್ನೂ ಅಂಗೀಕರಿಸಬೇಕಾಗಿದೆ. ಉಳಿದ ಗ್ರಾಮಗಳಲ್ಲಿ ನಿವೇಶನಗಳನ್ನು ರಚಿಸಿ ಸಂತ್ರಸ್ತರಿಗೆ ವಿತರಿಸಿದೆ. ಮೇಲೆ (ಆ)ನ ಉತ್ತರದಲ್ಲಿರುವ ಮೊದಲಿನ ಐದು ಗ್ರಾಮಗಳಲ್ಲಿ ನಿವೇಶನಗಳನ್ನು ಅಭಿವೃದ್ಧಿಗೊಳಿಸಿದೆ. ಇದಕ್ಕಾಗಿ ರೂ. 2.00 ಲಕ್ಷಗಳನ್ನು ವೆಚ್ಚ ಮಾಡಿದೆ. ವಿದ್ಯುತ್ ಸರಬರಾಜು ಮಾಡುವುದಕ್ಕಾಗಿ ವಿದ್ಯುತ್ ಮಂಡಲಿಗೆ ರೂ. 1.50 ಲಕ್ಷಗಳನ್ನು ಬಿಡುಗಡೆ ಮಾಡಿದೆ. ಕುಡಿಯುವ ನೀರಿನ ಪೂರೈಕೆಗಾಗಿ ರೂ. 0.50 ಲಕ್ಷಗಳನ್ನು ಖರ್ಚು ಮಾಡಲಾಗಿದೆ. ಒಟ್ಟು ರೂ.32.00 ಲಕ್ಷಗಳನ್ನು ಸಿಂಧನೂರು ತಾಲ್ಲೂಕಿನ ಗ್ರಾಮಗಳ ಪುನರ್ವಸತಿಗಾಗಿ ಬಿಡುಗಡೆ ಮಾಡಿದೆ.

ವಿಷಯ : – ರಾಯಚೂರು ಜಿಲ್ಲೆಯ ಬರಗಾಲ ಕಾಮಗಾರಿ ಕೆಲಸಗಳಿಗೆ ಸರ್ಕಾರ ಹಣ ಬಿಡುಗಡೆ ಮಾಡಿದ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 383(523)

ಶ್ರೀ ಬಿ. ಹಂಪನ ಗೌಡ (ಸಿಂಧನೂರು)

ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?